# 2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯಃ

# ಉತ್ತರ ಕನ್ನಡ : ಕಾರವಾರ

**ಎಸ್.ಸಿ. ನಂ. 10/2019**

**ದೋ.ಸಾ. : 30 ಪ್ರಾ.ಸಾ. : 10**

| | | |
|---|---|---|
| ಸಾಕ್ಷಿಯ ಹೆಸರು | : | ವಿದ್ಯಾಧರ ಸುರೇಶ ಆಚಾರಿ |
| ತಂದೆಯ ಹೆಸರು | : | ಸುರೇಶ ಆಚಾರಿ |
| ವಯಸ್ಸು | : | 40 ವರ್ಷ |
| ಕೆಲಸ | : | ಕೃಷಿ |
| ವಾಸ | : | ಅಂಬೊಳ್ಳಿ ಗ್ರಾಮ, ಬೊಗಾಳಿ, ತಾಃ ಜೊಯಿಡಾ |

**ದಿನಾಂಕಃ 20-03-2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಸರಕಾರಿ ಅಭಿಯೋಜಕರಿಂದ**

1. ಚಾಸಾ-29 ಸುರೇಶ ಆಚಾರಿ ನನ್ನ ತಂದೆ. ನಾವು ಜೊಯಿಡಾ ತಾಲೂಕಿನ ಕುಂಬಾರವಾಡದ ಬೊಗಾಳಿಯಲ್ಲಿ ವಾಸವಾಗಿರುತ್ತೇವೆ. ನಾನು ಮತ್ತು ನನ್ನ ತಂದೆ ಚಾಸಾ-29 ರವರು ಆಚಾರಿ ಕೆಲಸ ಹಾಗೂ ಕೃಷಿ ಕೆಲಸವನ್ನು ಮಾಡುತ್ತೇವೆ. ಆಚಾರಿ ಕೆಲಸ ಎಂದರೆ ರೈತರಿಗೆ ಕೃಷಿ ಕೆಲಸಕ್ಕೆ ಬೇಕಾಗುವ ಸಲಕರಣೆಗಳು ಅಂದರೆ ನೇಗಿಲು, ಗುದ್ದಲಿ, ಕುಡಗೋಲು ಹಾಗೂ ಕಬ್ಬಿಣದ ಇತರೇ ಸಲಕರಣೆಗಳನ್ನು ಮಾಡಿಕೊಡುತ್ತೇವೆ. ಸದರಿ ಸಲಕರಣೆಗಳನ್ನು ನಾವು ನಮ್ಮ ಮನೆಯಲ್ಲಿಯೇ ಮಾಡಿಕೊಡುತ್ತೇವೆ.

2. ಹೀಗೆ 7-8 ವರ್ಷಗಳ ಹಿಂದೆ ಪೊಲೀಸರು ಎರಡು ಜನರನ್ನು ಕರೆದುಕೊಂಡು ಬಂದಿದ್ದರು ಎಂದು ನನ್ನ ತಂದೆಯವರು ಹೇಳಿದ್ದರು. ಈಗ ನ್ಯಾಯಾಲಯದ ಮುಂದೆ ಇರುವ 2 ಮತ್ತು 3 ನೇ ಆರೋಪಿಗಳನ್ನು ನಾನು ಈ ಮೊದಲು ನೋಡಿರುವುದಿಲ್ಲ. ಈಗ ನ್ಯಾಯಾಲಯದ ಮುಂದೆ ಕುಳಿತಿರುವ ಆರೋಪಿಗಳನ್ನು ತೋರಿಸಿ, ಇವರ ಪೈಕಿ ಇಬ್ಬರು ಬಂದು, ಕತ್ತಿಯನ್ನು ಮಾಡಲು ಕಬ್ಬಿಣದ ಪಟ್ಟಿಯನ್ನು ಕೊಟ್ಟು, ಕತ್ತಿ ಮಾಡಲು ಹೇಳಿ, ಒಂದು ಕತ್ತಿಯನ್ನು ಖರೀದಿಸಿಕೊಂಡು ಹೋಗಿರುತ್ತಾರೆ ಎಂದು ನನ್ನ ತಂದೆಯವರು ಹೇಳಿರುತ್ತಾರೆ. ಆರೊಪಿತರು ಕತ್ತಿ ಮಾಡಲು ಕೊಟ್ಟ ಕಬ್ಬಿಣದ ಪಟ್ಟಿಯನ್ನು ಪೊಲೀಸರು ನನ್ನ ತಂದೆಯವರ ಕಡೆಯಿಂದ ಪಡೆದುಕೊಂಡರು. ಆ ದಿನ ಪೊಲೀಸರೊಂದಿಗೆ 2 ಮತ್ತು 3 ನೇ ಆರೋಪಿಗಳನ್ನು

ತೋರಿಸಿ ಇವರೇ ಜೊತೆಯಲ್ಲಿ ಬಂದಿದ್ದರು ಎಂದು ಹೇಳುತ್ತಾರೆ. ನಂತರ ಸ್ಥಳದಲ್ಲಿ ಫೋಟೋ ತೆಗೆದರು. ಆ ಸಮಯದಲ್ಲಿ ತೆಗೆದ ಫೋಟೋವನ್ನು ಸಾಕ್ಷಿಯು ನೋಡಿ ಗುರುತಿಸಿದ್ದು, ಅದನ್ನು ನಿಪಿ–32 ಎಂದು ಗುರುತಿಸಲಾಯಿತು. ನಿಪಿ–32 ಫೋಟೋದಲ್ಲಿ ನನ್ನ ತಂದೆಯು ಕಬ್ಬಿಣದ ಪಟ್ಟಿಯನ್ನು ಪೊಲೀಸರಿಗೆ ನೀಡುತ್ತಿದ್ದಾರೆ ಎಂದು ಸಾಕ್ಷಿಯು ಹೇಳಿರುತ್ತಾರೆ. ನಿಪಿ–32 ಫೋಟೋದಲ್ಲಿ 2 ಮತ್ತು 3 ನೇ ಆರೋಪಿಗಳನ್ನು ನೋಡಿ ಗುರುತಿಸಿ, ಇವರೇ ಕತ್ತಿಯನ್ನು ಖರೀದಿಸಿ ಹೋಗಿರುತ್ತಾರೆ ಎಂದು ನುಡಿದಿರುತ್ತಾರೆ.

3. ಪೊಲೀಸರು 2 ಮತ್ತು 3 ನೇ ಆರೋಪಿಗಳನ್ನು ನಮ್ಮ ಮನೆಯ ಹತ್ತಿರ ಕರೆದುಕೊಂಡು ಬಂದಾಗ, ಇವರು ಒಬ್ಬ ವ್ಯಕ್ತಿಯನ್ನು ಕೊಲೆ ಮಾಡಿರುವುದಾಗಿ ಹೇಳಿರುತ್ತಾರೆ ಹಾಗೂ ಆರೋಪಿಗಳು ಕತ್ತಿ ಮಾಡಲು ನೀಡಿದ ಕಬ್ಬಿಣದ ಪಟ್ಟಿಯನ್ನು ಜಪ್ತುಪಡಿಸಿಕೊಳ್ಳಲು ಬಂದಿರುವುದಾಗಿ ಹೇಳಿರುತ್ತಾರೆ. ಸಾಕ್ಷಿಯು ನ್ಯಾಯಾಲಯದ ಮುಂದೆ ಇರುವ ಕಬ್ಬಿಣದ ಪಟ್ಟಿಯನ್ನು ನೋಡಿ ಗುರುತಿಸಿದ್ದು, ಅದನ್ನು ಮುದ್ದೆ ಮಾಲು–12 ಎಂದು ಗುರುತಿಸಲಾಯಿತು. ಸಾಕ್ಷಿಯು ಸದರಿ ಪಟ್ಟಿಯನ್ನು ತೋರಿಸಿ, ಆರೋಪಿತರು ಇದೇ ಪಟ್ಟಿಯನ್ನು ಕತ್ತಿ ಮಾಡಲು ನೀಡಿದ್ದರು ಹಾಗೂ ಪೊಲೀಸರಿಗೆ ನಾವು ಇದೇ ಪಟ್ಟಿಯನ್ನು ನೀಡಿರುತ್ತೇವೆ ಎಂದು ಹೇಳಿರುತ್ತಾರೆ. ಈ ಬಗ್ಗೆ ನಾನು ಪೊಲೀಸರ ಮುಂದೆ ಹೇಳಿಕೆಯನ್ನು ನೀಡಿರುತ್ತೇನೆ. ಈಗ ನ್ಯಾಯಾಲಯದ ಮುಂದೆ ಇರುವ 2 ಮತ್ತು 3 ನೇ ಆರೋಪಿಗಳನ್ನು ಸಾಕ್ಷಿ ನೋಡಿ ಗುರುತಿಸಿರುತ್ತಾರೆ.

**ಪಾಟೀ ಸವಾಲುಃ 1 ನೇ ಆರೋಪಿ ಪರ ಶ್ರೀ ಎ.ಎ.ಎ. ವಕೀಲರಿಂದ**

ಪಾಟೀ ಸವಾಲು ಇರುವುದಿಲ್ಲ ಎಂದು ಹೇಳಿರುತ್ತಾರೆ.

**ಪಾಟೀ ಸವಾಲುಃ 2 ಮತ್ತು 3 ನೇ ಆರೋಪಿತರ ಪರ ಶ್ರೀ ಎಲ್.ಎಸ್.ಕೆ. ವಕೀಲರಿಂದ**

4. ನಾನು 9 ನೇ ತರಗತಿ ವರೆಗೆ ವಿದ್ಯಾಭ್ಯಾಸ ಮಾಡಿರುತ್ತೇನೆ. ನನ್ನ ತಂದೆಯವರಿಗೆ ನಾನು ಒಬ್ಬನೇ ಗಂಡು ಮಗ ಹಾಗೂ ನಾಲ್ಕು ಜನ ಹೆಣ್ಣು ಮಕ್ಕಳು. ಹೀಗೆ ಸುಮಾರು 7–8 ವರ್ಷಗಳ ಹಿಂದೆ ನಮ್ಮ ಮನೆಯಲ್ಲಿ ನಾನು, ನನ್ನ ಹೆಂಡತಿ ಮತ್ತು ಮಕ್ಕಳು ಹಾಗೂ ನನ್ನ ತಂದೆ–ತಾಯಿ ವಾಸವಾಗಿದ್ದೆವು. ಅಂಬೊಳ್ಳಿ ಮತ್ತು ಬೊಗಾಳಿ ಊರುಗಳ ನಡುವೆ ಸಮಾರು 1 ½ ಕಿ.ಮೀ ಅಂತರದಲ್ಲಿರುತ್ತವೆ. ಬೊಗಾಳಿಯಿಂದ ಕುಂಬಾರವಾಡಕ್ಕೆ ಸುಮಾರು 15–16 ಕಿ.ಮೀ

ಇರುತ್ತವೆ. ಕುಂಬಾರವಾಡದಲ್ಲಿ ನಮ್ಮ ಮನೆ ಇರುವುದಿಲ್ಲ. ಅದೇ ರೀತಿ ಕುಂಬಾರವಾಡದಲ್ಲಿ ಕೃಷಿ ಸಲಕರಣೆಗಳನ್ನು ಮಾಡುವ ನಮ್ಮದು ಯಾವುದೇ ಸ್ಥಳ ಇರುವುದಿಲ್ಲ.

5. ಆಚಾರಿ ಕೆಲಸ ಮಾಡಲು ನಾವು ಯಾವುದೇ ಲೈಸೆನ್ಸ ತೆಗೆದುಕೊಂಡಿರುವುದಿಲ್ಲ. ಪೊಲೀಸರು 2 ಮತ್ತು 3 ನೇ ಆರೋಪಿಗಳನ್ನು ಕರೆದುಕೊಂಡು ಬಂದಿದ್ದ ದಿನಾಂಕ ಹಾಗೂ ಇಸ್ವಿಯನ್ನು ನನಗೆ ಹೇಳಲು ಬರುವುದಿಲ್ಲ. ಪೊಲೀಸರು 2 ಮತ್ತು 3 ನೇ ಆರೋಪಿಗಳನ್ನು ನಮ್ಮ ಮನೆಯ ಬಳಿ ಮದ್ಯಾಹ್ನ 12-00 ಗಂಟೆಯ ನಂತರ ಕರೆದುಕೊಂಡು ಬಂದಿದ್ದು, ಆ ದಿನ ನಾನು ಮನೆಯಲ್ಲಿದ್ದೆ. ಪೊಲೀಸರು ಆ ದಿನ ನಮ್ಮ ಮನೆಯ ಹತ್ತಿರ ಬಂದಾಗ ಸುಮಾರು 20 ನಿಮಿಷಗಳ ಕಾಲ ನಮ್ಮ ಮನೆಯ ಹತ್ತಿರ ಇದ್ದರು. ಆ ದಿನ ಪೊಲೀಸರು 2 ಮತ್ತು 3 ನೇ ಆರೋಪಿಗಳನ್ನು ನಮ್ಮ ಮನೆಯ ಹತ್ತಿರ ಕರೆದುಕೊಂಡು ಬಂದಾಗ, ನನ್ನ ತಂದೆಯವರು ಮಾತನಾಡಿರುತ್ತಾರೆ, ಆದರೆ ನಾನು ಮಾತನಾಡಿರುವುದಿಲ್ಲ. ಯಾರಾದರೂ ಜನರು ಕೃಷಿ ಸಲಕರಣೆಗಳನ್ನು ಮಾಡಲು ಕಬ್ಬಿಣವನ್ನು ನೀಡಿದರೆ ಮಾಡಿಕೊಡುತ್ತೇವೆ. ಅದೇ ರೀತಿ ನಮ್ಮ ಬಳಿ ಇರುವ ಕಬ್ಬಿಣದಿಂದಲೂ ಸಹ ಕೃಷಿ ಸಲಕರಣೆಗಳನ್ನು ಮಾಡಿಕೊಡುತ್ತೇವೆ ಎಂದು ನುಡಿಯುತ್ತಾರೆ. ನಾವು ಎಲ್ಲಿಯೂ ಕಬ್ಬಿಣವನ್ನು ಖರೀದಿ ಮಾಡುವುದಿಲ್ಲ. ಈ ಹಿಂದೆ ಸಲಕರಣೆಗಳನ್ನು ಮಾಡಿಕೊಟ್ಟ ನಂತರ ಉಳಿದ ಕಬ್ಬಿಣದಿಂದಲೂ ಸಹ ಕೃಷಿ ಸಲಕರಣೆಗಳನ್ನು ಮಾಡಿಕೊಡುತ್ತೇವೆ ಎಂದು ನುಡಿಯುತ್ತಾರೆ. ಯಾರಾದರೂ ಕೃಷಿ ಸಲಕರಣೆಗಳನ್ನು ಮಾಡಿಕೊಡುವಂತೆ ಕೇಳಿಕೊಂಡು ಬಂದರೆ ಅವರೂ ಸಹ ಮುದ್ದೆ ಮಾಲು-12 ಕಬ್ಬಿಣದ ಪಟ್ಟಿಯಂತಹ ವಸ್ತುವನ್ನು ನೀಡುತ್ತಾರೆ ಎಂದರೆ ಸರಿ. ಮುದ್ದೆ ಮಾಲು-12 ಕಬ್ಬಿಣದ ಪಟ್ಟಿಯನ್ನು ಕೊಡುವಾಗ ನಾನು ಇರಲಿಲ್ಲ, ಆದರೆ ನನ್ನ ತಂದೆಯವರ ಕೈಗೆ ಕೊಟ್ಟು ಹೋಗಿರುತ್ತಾರೆ.

6. ಆ ದಿನ ನಮ್ಮ ಮನೆಯ ಹತ್ತಿರ 2-3 ಜನ ಪೊಲೀಸರು ಬಂದಿದ್ದರು. 2 ಮತ್ತು 3 ನೇ ಆರೋಪಿತರು ಕೊಲೆ ಮಾಡಿರುತ್ತಾರೆ ಎಂದು ಹೇಳಿದ ಪೊಲೀಸರ ಹೆಸರು ಮತ್ತು ಪದನಾಮ ನನಗೆ ಹೇಳಲು ಬರುವುದಿಲ್ಲ. 2 ಮತ್ತು 3 ನೇ ಆರೋಪಿತರು ಕತ್ತಿಯನ್ನು ಖರೀದಿ ಮಾಡಿ ಹೋದ ಸಮಯದಲ್ಲಿ ನಾನು ಇರುವುದಿಲ್ಲ. ಪೊಲೀಸರು ನನಗೆ ಇದೇ ರೀತಿ ನ್ಯಾಯಾಲಯದಲ್ಲಿ ಸಾಕ್ಷ್ಯ ಹೇಳಬೇಕೆಂದು ಹೇಳಿಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ. ನಾನು ಈ ದಿನ ನ್ಯಾಯಾಲಯಕ್ಕೆ ಸಾಕ್ಷ್ಯ ನುಡಿಯಲು ಬಂದಾಗ ರಾಜೇಶ ನಾಯರ ಎನ್ನುವರು ನನ್ನ

ಜೊತೆ ಮಾತನಾಡುತ್ತಿದ್ದರು ಎಂದರೆ ಸರಿಯಲ್ಲ. ಪೊಲೀಸರು ಹಾಗೂ ರಾಜೇಶ ನಾಯರ ರವರು ಹೇಳಿಕೊಟ್ಟಂತೆ ನಾನು ದಿನ ನ್ಯಾಯಾಲಯದಲ್ಲಿ ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. 2 ಮತ್ತು 3 ನೇ ಆರೋಪಿತರು ಎಂದಿಗೂ ನಮ್ಮ ಮನೆಗೆ ಬಂದು ಕಬ್ಬಿಣದ ಪಟ್ಟಿಯನ್ನು ನೀಡಿ, ಕತ್ತಿಯನ್ನು ಖರೀದಿ ಮಾಡಿದ್ದರು ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ 4 ನೇ ಆರೋಪಿ ಪರ ಶ್ರೀ ವಿ.ಎನ್.ಎನ್ ವಕೀಲರಿಂದ**

ಪಾಟೀ ಸವಾಲು ಇರುವುದಿಲ್ಲ ಎಂದು ಹೇಳಿರುತ್ತಾರೆ.

**ಪಾಟೀ ಸವಾಲುಃ 5 ನೇ ಆರೋಪಿ ಪರ ಶ್ರೀ ಹೆಚ್.ಎಸ್.ಎಸ್.ವಕೀಲರಿಂದ**

ಪಾಟೀ ಸವಾಲು ಇರುವುದಿಲ್ಲ ಎಂದು ಹೇಳಿರುತ್ತಾರೆ.

**ಮರು ವಿಚಾರಣೆಃ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಸಾಕ್ಷಿಯ ಹೇಳಿಕೆಯನ್ನು ಗಣಕ ಯಂತ್ರದ ಮೂಲಕ ಬೆರಳಚ್ಚು ಮಾಡಿಸಲಾಗಿದೆ.)

ಓ.ಹೇ.ಕೇ.ಸ.ಇ.

ಸಹಿ ಇದೆ/-

(ಮಾಯಣ್ಣ ಬಿ.ಎಲ್.)
2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಉತ್ತರಕನ್ನಡ, ಕಾರವಾರ